ಎಲ್ಲರೂ ಕುಡಿಯುತ್ತಾರೆ. ಕುಡಿಯದವರು ಯಾರಿದ್ದಾರೆ? ಕಾರ್ಕಳ ಗೊಮ್ಮಟೇಶ್ವರ ಮಾತ್ರ...' ತನ್ನ ಜೋಕಿಗೆ ತಾನೇ ನಕ್ಕ ಅಪ್ಪ.

'ಅಮಲೇರಿಸಿಕೊಂಡಿರುವ ನಿನ್ನಲ್ಲೆಂಥ ಮಾತು?' ಸಿಡುಕಿ ಹಿಂದೆ ಹೊರಟಿದ್ದರು ಮಾಸ್ತರರು.

ಅಪ್ಪನನ್ನೇ ದುರುಗುಟ್ಟಿ ನೋಡಿದ ಮಗ. 'ಬಾ ಹೋಗೋಣ' ಅಂದ ಅಪ್ಪ.

'ಅವರೆಷ್ಟು ಬಾರಿ ಹೇಳಿದರೂ ನಿನಗೆ ಅರ್ಥವಾಗೋದಿಲ್ಲ' ಕೋಪದಿಂದ ಬುಸುಗುಟ್ಟಿ ಬಿರುಸಿನಲ್ಲಿ ಮುನ್ನಡೆದ ಮಗ.

★★★

'ನೋಡು, ಇವತ್ತೂ ಬರ್ಲಿಲ್ಲ ನಿನ್ನಪ್ಪ. ನನಗೆ ಸಾಕಾಯ್ತು. ಯಾವುದೋ ಒಂದು ಕಾಲದಲ್ಲಿ ನನ್ನಜ್ಜ ಮುತ್ತಜ್ಜ, ನಿನ್ನಜ್ಜ ಮುತ್ತಜ್ಜರನ್ನು ತುಳಿದು ದಮನ ಮಾಡಿದ್ದರು ಅಂತ ನಾನು ಕಲಿಯುವಾಗ ಇತಿಹಾಸ ಹೇಳಿತ್ತು. ಸ್ವಾತಂತ್ರ್ಯಾನಂತರ ಸರ್ಕಾರ ಕೂಡ ಹೀಗೆಯೇ ಹೇಳುತ್ತ ಬಂದಿರುವುದನ್ನು ಒಪ್ಪಿಕೊಂಡು ಬಳುವಳಿಯಾಗಿ ತಲೆಯ ಮೇಲೆ ಬಂದ ದೂಷಣೆಗೆ ಪ್ರಾಯಶ್ಚಿತ್ತ ಮಾಡಿಕೊಳ್ಳೋಕೆ ಹೊರಟದ್ದು ನಾನು. ನಿನ್ನಂತಹ ಬಡ ಮಕ್ಕಳಿಗೆ ಕಲಿಕೆಯಲ್ಲಿ ಸಹಾಯ ಮಾಡುತ್ತೇನೆ, ನನ್ನ ಟ್ಯೂಶನ್ ಕ್ಲಾಸಿಗೆ ಬರಲಿ, ಫೀಸು ಕೊಡುವುದು ಬೇಡ ಅಂತ ಹೇಳಿದ್ದಕ್ಕೆ ಸಿಕ್ಕಿಹಾಕಿಕೊಂಡಿದ್ದೇನೆ ನಾನು. ಈ ದೇಶದಲ್ಲಿ ಇವತ್ತು ಹೇಗೆ ಗೊತ್ತಾ? ಶ್ರೀಮಂತರು ಹಾಯಾಗಿದ್ದಾರೆ. ರಾಜಕೀಯದ ಜನರು ಬಡವರಿಗಾಗಿ ಯೋಜನೆಗಳನ್ನು ಘೋಷಿಸಿ, ಕೆಲಸ ಏನೂ ಮಾಡದೆ, ಅದರ ಹಣವನ್ನು ತಾವೇ ಬಾಚಿ ತಿನ್ನುತ್ತಾ ಬೆಳೆಯುತ್ತಿದ್ದಾರೆ. ಟ್ಯೂಶನ್ನು ಬಿಡು, ಸ್ಲೇಟಿಗೂ ಕಡ್ಡಿಗೂ ಗತಿಯಿಲ್ಲದ ಬಡವರಿಗೆ, ದಲಿತರಿಗೆ ಏನಾದರೂ ಸಹಾಯವನ್ನು ಕನಿಕರವಿರುವ ಮಧ್ಯಮವರ್ಗದ ಜನರೇ ಮಾಡುತ್ತಾ ಇರುವುದು. ನಾಳೆಯಿಂದ ನೀನು ಕ್ಲಾಸಿಗೇ ಬರುವುದು ಬೇಡ ಅಂತ ಹೇಳಲು ನನಗೆ ಯಾರ ಭಯವೂ ಇಲ್ಲ. ವಿದ್ಯಾದಾನ ಶ್ರೇಷ್ಠ ದಾನ ಅಂತೆಲ್ಲ ತಲೆಯೊಳಗೆ ಹುಳ ಬಿಟ್ಟಿದ್ದಾರಲ್ಲ ನಮ್ಮ ಪೂರ್ವಜರು... ಒಬ್ಬ ಹುಡುಗನ ಭವಿಷ್ಯತ್ತಿನ ಪ್ರಶ್ನೆ ಎಂದು ನಾನು ಸಹಿಸಿಕೊಂಡಿರುವುದು. ಅದನ್ನು ಆತ ನಿನ್ನಪ್ಪ ಲಘುವಾಗಿ ಪರಿಗಣಿಸಿದ್ದಾನೆ. ಮನುಷ್ಯ ಸುಖವಾಗಿ ಬದುಕಬೇಕಿದ್ದರೆ ಯಾವ ಮುಲಾಜಿಗೂ ಬಲಿ ಬೀಳಬಾರದು. ಇದು ಶಿಕ್ಷಕನಾದ ನನಗೆ ನಿನ್ನಪ್ಪ ಕಲಿಸಿಕೊಟ್ಟ ದೊಡ್ಡ ಪಾಠ' ಶತಪಥ ಹಾಕುತ್ತ ಮಾಸ್ತರರು ತಮ್ಮ ಕೋಪ ಇಳಿಸಿಕೊಳ್ಳುತ್ತಲೇ ಅಪ್ಪ ಬರುವುದಕ್ಕೆ ಕಾಯುತ್ತಿದ್ದರು. ಉಳಿದ ಹುಡುಗರೆಲ್ಲ ತಮ್ಮ ಮನೆಯವರ ಜತೆ ಹೊರಟು ಹೋಗಿಯಾಗಿತ್ತು.

ದೊಡ್ಡ ಗದ್ದಲದ ನಾಲ್ಕಾರು ದನಿಗಳು ಒಟ್ಟಿಗೇ ಕತ್ತಲಲ್ಲಿ ಕೇಳಿಸಿದವು. ಎಲ್ಲರೂ ಅವರಿಗೆ ತೋಚಿದಂತೆ ಮಾತಾಡುತ್ತಿದ್ದರು. ಮಗ ರಸ್ತೆಬದಿಗೆ ಬಂದು ನೋಡಿದ. ನಡೆದು ಬರುತ್ತಿದ್ದದ್ದು ಅಪ್ಪನ ಗೆಳೆಯರು. 'ನಾವು ನ್ಯಾಯ ಕೇಳಲು ಬಂದದ್ದು. ಗಲಾಟೆ ಮಾಡಲಿಕ್ಕಲ್ಲ. ಟ್ಯೂಶನ್ ಕೊಟ್ಟದ್ದಕ್ಕೆ ಹಣ ಕೇಳಲಿ, ಅವನಪ್ಪ ಇದ್ದರೆ ಕೊಡುತ್ತಾನೆ, ಇಲ್ಲದಿದ್ದರೆ ನಾಳೆಯಿಂದ ಕಳುಹಿಸುವುದಿಲ್ಲ. ಕುಡುಕ ಎಂದು ಹೀಯಾಳಿಸುವುದಾ? ನಾವೇನು ಕಳ್ಳಭಟ್ಟಿ ಕುಡಿದದ್ದಾ? ಸರ್ಕಾರ ಕೊಟ್ಟದ್ದೇ ಮಾಲು. ಯಾವುದಕ್ಕೂ ಕೇಳಲು ಇವರು ಯಾರು? ಇವರ ಹಣ ಕದ್ದು ಕುಡಿದದ್ದಾ? ದರೋಡೆ ಮಾಡಿದ್ದೇವಾ? ಹೀಗೆ ಏನೆಲ್ಲ ಮಾತುಗಳು. ಹುಡುಗ ಪಕ್ಕಕ್ಕೆ ಸರಿದು ನಿಂತ. ಯಾರಿಗೂ ನೇರ ನಡೆಯಲಾಗುತ್ತಿರಲಿಲ್ಲ. ಇದೇ ಮನೆಯಲ್ಲವಾ? ಹೌದು ಅನ್ನಿಸುತ್ತೆ... ಮಾಸ್ತರಾ ಏ ಮಾಸ್ತರಾ...' ಬೊಬ್ಬೆ ಹಾಕಿ ಕರೆದರು. ಶತಪಥ ಹಾಕುತ್ತಿದ್ದ ಮಾಸ್ತರರು ಅಲ್ಲೇ ನಿಂತರು.

'ಯಾರು ಬೇಕಾಗಿತ್ತು ನಿಮಗೆ?'